# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 658 |
| 2) | ಸದಸ್ಯರ ಹೆಸರು | : | ಶ್ರೀ. ಕೆ. ಎ ತಿಪ್ಪೇಸ್ವಾಮಿ |
| 3) | ಉತ್ತರಿಸಬೇಕಾದ ದಿನಾಂಕ: | : | 20.02.2024 |
| 4) | ಉತ್ತರಿಸುವವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರು ಉಪ ನಗರ ರೈಲ್ವೆ ಯೋಜನೆಯ ಧ್ಯೇಯೋದ್ದೇಶಗಳು ಯಾವುವು ಮತ್ತು ಈ ಯೋಜನೆಯ ಅನುಷ್ಠಾನಕ್ಕೆ ತಯಾರಿಸಿರುವ ಪರಿಷ್ಕೃತ ವರದಿ ಪ್ರಕಾರ ಮುಖ್ಯಾಂಶಗಳು ಯಾವುವು: ಯೋಜನೆಯ ಅಂಕಿ ಅಂಶಗಳು ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು; | ಬೆಂಗಳೂರು ನಗರದ ನಾಗರಿಕರಿಗೆ ಸುರಕ್ಷಿತ, ಕ್ಷಿಪ್ರ Mass Rapid ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಬೆಂಗಳೂರು ಉಪನಗರ ರೈಲು ಯೋಜನೆಯ ಮುಖ್ಯ ಧ್ಯೇಯೋದ್ದೇಶ. ಈ ಯೋಜನೆಯ ವಿಸ್ತೃತ ಯೋಜನಾ ವರದಿ ಹಾಗೂ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಪಡೆದಿರುವ ಅನುಮೋದನೆಗಳ ಪ್ರಕಾರ ಈ ಯೋಜನೆಯ ಪ್ರಮುಖ ಮುಖ್ಯಾಂಶಗಳು ಈ ಕೆಳಕಂಡಂತಿವೆ.<br><br>ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಭಾರತ ಸರ್ಕಾರವು ದಿನಾಂಕ:21.10.2020 ರಂದು ರೈಲ್ವೆ ಸಚಿವಾಲಯ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಮೂಲಕ ರೂ.15,767 ಕೋಟಿಗಳ ಅಂದಾಜು ವೆಚ್ಚದಲ್ಲಿ ಮತ್ತು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ರೋಲಿಂಗ್ ಸ್ಟಾಕ್ ಅನ್ನು ಪಡೆಯುವ ವ್ಯವಸ್ಥೆಯೊಂದಿಗೆ ಮಂಜೂರು ಮಾಡಿರುತ್ತದೆ.<br><br>ಬೆಂಗಳೂರು ಉಪನಗರ ರೈಲು ಯೋಜನೆಯು 58 ನಿಲ್ದಾಣಗಳೊಂದಿಗೆ ಒಟ್ಟು 148.17 ಕಿ.ಮೀ ಉದ್ದದ 4 ಕಾರಿಡಾರ್‌ಗಳನ್ನು ಹೊಂದಿದೆ. |

| ಕಾರಿಡಾರ್ ಗಳು | ವಿಭಾಗ | ಉದ್ದ (ಕಿ.ಮೀ.) |
|---|---|---|
| 1 | ಬೆಂಗಳೂರು - ದೇವನಹಳ್ಳಿ + ವಿಮಾನ ನಿಲ್ದಾಣ ಸಂಪರ್ಕ | 41.40 |
| 2 | ಬೈಯಪ್ಪನಹಳ್ಳಿ - ಚಿಕ್ಕಬಾಣಾವರ | 25.01 |
| 3 | ಕೆಂಗೇರಿ - ವೈಟ್ ಫೀಲ್ಡ್ | 35.52 |
| 4 | ಹೀಲಲಿಗೆ - ರಾಜನುಕುಂಟೆ | 46.24 |
| ಒಟ್ಟು | | 148.17 |

| | | |
|---|---|---|
| | | **<u>ಬೆಂಗಳೂರು ಉಪನಗರ ರೈಲು ಯೋಜನೆಯ ಪ್ರಗತಿ:</u>**<br><br>(ಎ) ಈವರೆಗೆ ಕರ್ನಾಟಕ ಸರ್ಕಾರದಿಂದ ರೂ.665.42 ಕೋಟಿಗಳು ಹಾಗೂ ರೈಲ್ವೆ ಇಲಾಖೆಯಿಂದ ರೂ.500.00 ಕೋಟಿಗಳು, ಒಟ್ಟಾರೆಯಾಗಿ ರೂ.1165.42 ಕೋಟಿಗಳ ಅನುದಾನವನ್ನು ಈ ಯೋಜನೆಗಾಗಿ ಒದಗಿಸಲಾಗಿದೆ. ಈವರೆಗೆ ರೂ.655.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.<br><br>(ಬಿ) ಚಿಕ್ಕಬಾಣಾವರ-ಯಶವಂತಪುರ-ಬೈಯಪ್ಪನಹಳ್ಳಿ (25 ಕಿ.ಮೀ) ವ್ಯಾಪ್ತಿಯ ಕಾರಿಡಾರ್-2 ರ ಸಿವಿಲ್ ಕಾಮಗಾರಿಗೆ ದಿನಾಂಕ: 26.08.2022 ರಂದು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯು ಆರಂಭಗೊಂಡಿರುತ್ತದೆ.<br><br>(ಸಿ) ರಾಜನುಕುಂಟೆ-ಯಲಹಂಕ-ಬೈಯಪ್ಪನಹಳ್ಳಿ-ಹೀಲಲಿಗೆ (46.24 ಕಿ.ಮೀ) ವ್ಯಾಪ್ತಿಯ ಕಾರಿಡಾರ್-4 ರ ಸಿವಿಲ್ ಕಾಮಗಾರಿಗೆ ದಿನಾಂಕ: 30.12.2023 ರಂದು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿಯ ಪ್ರಾಥಮಿಕ ಕಾರ್ಯಗಳನ್ನು ಆರಂಭಿಸಲಾಗಿದೆ.<br><br>(ಡಿ) ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ರೋಲಿಂಗ್ ಸ್ಟಾಕ್ (ಕೋಚ್ ಮತ್ತು ಇಂಜಿನ್‌ಗಳು) ಅನ್ನು ಪಡೆಯುವ ಸಲುವಾಗಿ ಟೆಂಡರ್ ಕರೆಯಲಾಗಿದ್ದು, 3 ಸಂಸ್ಥೆಗಳು ಅರ್ಹತೆ ಹೊಂದಿದ್ದು, ದಿನಾಂಕ:28.02.2024 ರಂದು ಹಣಕಾಸು ಟೆಂಡರ್ ಅನ್ನು ತೆರೆಯಲಾಗುವುದು.<br><br>(ಇ) ದಿನಾಂಕ:15-12-2023ರಂದು ಜರ್ಮನಿಯ KfW ಡೆವಲಪ್‌ಮೆಂಟ್ ಬ್ಯಾಂಕ್‌ನೊಂದಿಗೆ ಯುರೋ 500 ಮಿಲಿಯನ್ (ಅಂದಾಜು ರೂ.4500 ಕೋಟಿಗಳು) ಸಾಲದ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಮತ್ತು ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ (EIB) ನೊಂದಿಗೆ ಯೂರೋ 300 ಮಿಲಿಯನ್ (ಅಂದಾಜು ರೂ.3000 ಕೋಟಿಗಳು) ಸಾಲ ಒಪ್ಪಂದಕ್ಕೆ ಮಾರ್ಚ್-2024ರಲ್ಲಿ ಸಹಿ ಹಾಕಲು ಯೋಜಿಸಲಾಗಿದೆ.<br><br>(ಎಫ್) ಈ ಯೋಜನೆಯನ್ನು ಡಿಸೆಂಬರ್-2027 ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಅದಕ್ಕೆ ಪೂರಕವಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

| | | |
|---|---|---|
| (ಆ) | ಬೆಂಗಳೂರು ಉಪ ನಗರ ರೈಲ್ವೆ ಯೋಜನೆ ಅನುಷ್ಠಾನಗೊಳಿಸಲು ಸ್ಥಾಪಿತವಾಗಿರುವ ಸಾಂಸ್ಥಿಕ ವ್ಯವಸ್ಥೆ ಯಾವುವು; ಈ ಸಂಸ್ಥೆಯ ಕಾರ್ಯಚಟುವಟಿಕೆಗಳು ಸಂಪನ್ಮೂಲ ಕ್ರೋಢೀಕರಣ ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು; | ಈ ಯೋಜನೆಯನ್ನು ಕೆ-ರೈಡ್ ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಸಂಸ್ಥೆಯು ಕರ್ನಾಟಕ ಸರ್ಕಾರ ಹಾಗೂ ರೈಲ್ವೆ ಇಲಾಖೆಗಳ ಜಂಟಿ ಸಹಭಾಗಿತ್ವದ ಸಂಸ್ಥೆಯಾಗಿದೆ.<br><br>ರೂ.15,767 ಕೋಟಿಗಳ ಆರ್ಥಿಕ ಸಂಪನ್ಮೂಲವನ್ನು 20:20:60 (ಕರ್ನಾಟಕ ಸರ್ಕಾರದ ಅನುದಾನ : ರೈಲ್ವೆ ಇಲಾಖೆಯ ಅನುದಾನ : ಬಾಹ್ಯ ಸಾಲ) ರ ಅನುಪಾತದಲ್ಲಿ ಹೊಂದಿಸಿಕೊಳ್ಳಲಾಗುತ್ತಿದೆ. ಈ ವ್ಯವಸ್ಥೆಯ ಅನುಸಾರ ಕರ್ನಾಟಕ ಸರ್ಕಾರದಿಂದ ರೂ.2,479 ಕೋಟಿಗಳು ಹಾಗೂ ರೈಲ್ವೆ ಇಲಾಖೆಯಿಂದ ರೂ.2,479 ಕೋಟಿಗಳನ್ನು ಈಕ್ವಿಟಿಯ ರೂಪದಲ್ಲಿ ಒದಗಿಸಬೇಕಾಗಿರುತ್ತದೆ, ಜೊತೆಗೆ ಕರ್ನಾಟಕ ಸರ್ಕಾರದಿಂದ ರೂ.1,138 ಕೋಟಿಗಳ Sub-ordinate debt ಹಾಗೂ ರೂ.1,470 ಕೋಟಿಗಳ ಭೂಸ್ವಾಧೀನ ಪರಿಹಾರದ ಮೊತ್ತವನ್ನು ಹಾಗೂ ರೈಲ್ವೆ ಇಲಾಖೆಯಿಂದ ರೂ.763 ಕೋಟಿಗಳ Sub-ordinate debt ಅನ್ನು ಒದಗಿಸಬೇಕಾಗಿರುತ್ತದೆ. (ಈ ಯೋಜನೆಗಾಗಿ ರಾಜ್ಯ ಸರ್ಕಾರದ ಪಾಲು ಒಟ್ಟು ರೂ.5,087 ಕೋಟಿಗಳು ರೈಲ್ವೆ ಇಲಾಖೆಯಿಂದ ರೂ.3,242 ಕೋಟಿಗಳು). ರಾಜ್ಯ ಸರ್ಕಾರ ಈವರೆಗೆ ರೂ.665.42 ಕೋಟಿಗಳನ್ನು ಹಾಗೂ ರೈಲ್ವೆ ಇಲಾಖೆಯು ರೂ.500 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತದೆ. ಇದರಲ್ಲಿ ರೂ.655 ಕೋಟಿಗಳನ್ನು ಕಾಮಗಾರಿಗಾಗಿ ವ್ಯಯ ಮಾಡಲಾಗಿರುತ್ತದೆ.<br><br>ಈ ಯೋಜನೆಗಾಗಿ ರೂ.7,438 ಕೋಟಿಗಳ ಆರ್ಥಿಕ ಸಂಪನ್ಮೂಲವನ್ನು ಬಾಹ್ಯ ಸಾಲದ ರೂಪದಲ್ಲಿ ಹೊಂದಿಸಿಕೊಳ್ಳಬೇಕಾಗಿರುತ್ತದೆ. ಇದಕ್ಕಾಗಿ KFW Development Bank (Germany) ಮೂಲಕ ರೂ.4,500 ಕೋಟಿಗಳ ಸಾಲವನ್ನು ಪಡೆಯಲು ಈಗಾಗಲೇ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ. ಲಕ್ಸಂಬರ್ಗ್ ನಲ್ಲಿ ಕೇಂದ್ರ ಕಛೇರಿಯನ್ನು ಹೊಂದಿರುವ European Investment Bank ನಿಂದ ರೂ.3,000 ಕೋಟಿಗಳ ಸಾಲವನ್ನು ಪಡೆಯಲು ಅಗತ್ಯ ಕ್ರಮವನ್ನು ಕೈಗೊಳ್ಳಲಾಗಿದ್ದು, ಶೀಘ್ರದಲ್ಲಿಯೇ ಈ ಕುರಿತ ಒಡಂಬಡಿಕೆ ಪತ್ರಕ್ಕೆ ಸಹಿಯನ್ನು ಹಾಕಲಾಗುವುದು.<br><br>ರೂ.15,767 ಕೋಟಿಗಳ ಅಂದಾಜು ವೆಚ್ಚದಲ್ಲಿ Rolling Stock (ಕೋಚ್ ಮತ್ತು ಇಂಜಿನ್‌ಗಳು) ಅನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ವ್ಯವಸ್ಥೆಯಡಿಯಲ್ಲಿ ಖರೀದಿಸಬೇಕಾಗಿದ್ದು, ಈ ಕುರಿತಂತೆ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. |

| | | |
|---|---|---|
| (ಇ) | ಬೆಂಗಳೂರು ಉಪ ನಗರ ರೈಲ್ವೆ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ ಮತ್ತು ವಿವಿಧ ಕಾರಿಡಾರ್‌ಗಳ ನಿರ್ಮಾಣ ಯಾವ ಹಂತದಲ್ಲಿವೆ; ಯೋಜನೆಯ ಒಟ್ಟು ಅಂದಾಜು ವೆಚ್ಚ ,ಭೌತಿಕ ಮತ್ತು ಆರ್ಥಿಕ ಗುರಿ ಹಾಗೂ ಪ್ರಗತಿ ಒಳಗೊಡಂತೆ ಪೂರ್ಣ ಮಾಹಿತಿ ನೀಡುವುದು; | ಈ ಯೋಜನೆಗೆ ಬೇಕಾಗಿರುವ ಶೇ.80 ರಷ್ಟು ಭೂಮಿಯನ್ನು ರೈಲ್ವೆ ಇಲಾಖೆಯು ಒದಗಿಸುತ್ತಿದೆ (327 ಎಕರೆ). ಕೇವಲ 130.10 ಎಕರೆ ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿದ್ದು, ಈವರೆಗೆ 47.91 ಎಕರೆಗಳ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಉಳಿದ 82.19 ಎಕರೆಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>**<u>ವಿವಿಧ ಕಾರಿಡಾರ್‌ಗಳಲ್ಲಿನ ಕಾಮಗಾರಿ / ಸಿದ್ಧತೆಯ ಮಾಹಿತಿ ಈ ಕೆಳಕಂಡಂತಿದೆ:</u>**<br><br>**ಕಾರಿಡಾರ್-2: ಬೈಯಪ್ಪನಹಳ್ಳಿ – ಚಿಕ್ಕಬಾಣಾವಾರ (25.01 ಕಿ.ಮೀ)**<br>• ಈ ಕಾರಿಡಾರ್‌ನ ಸಿವಿಲ್ ಕಾಮಗಾರಿಗಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br><br>**ಕಾರಿಡಾರ್-4: ಹೀಲಲಿಗೆ – ರಾಜನುಕುಂಟೆ (46.24 ಕಿ.ಮೀ)**<br>• ಈ ಕಾರಿಡಾರ್‌ನ ಸಿವಿಲ್ ಕಾಮಗಾರಿಗಾಗಿ ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಶೀಘ್ರದಲ್ಲಿಯೇ ಕಾಮಗಾರಿಯನ್ನು ಆರಂಭಿಸಲಾಗುವುದು.<br><br>ಉಳಿದ 2 ಕಾರಿಡಾರ್‌ಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸಿವಿಲ್ ಕಾಮಗಾರಿಯ ಟೆಂಡರ್ ಅನ್ನು ಕರೆಯಲು ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ.<br><br>ಈ ಯೋಜನೆಯನ್ನು ಡಿಸೆಂಬರ್-2027 ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ನಿಗದಿತ ಸಮಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. |

ಸಂಖ್ಯೆ: ಮೂಅಇ 36 ರಾರಾಹೆ 2024/ಇ

**(ಎಂ.ಬಿ ಪಾಟೀಲ)**
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು